ಚಿಮ್ಮುವ ಚಿಗರೆಯಂತಿದ್ದ ಹುಡುಗಿ ಈ ಮನೆಯಲ್ಲಿ ತಾನೊಂದು ಪುಗಸಟ್ಟೆ ಆಳು ಎನ್ನುವ ಭಾವನೆಯಿಂದ ಕಂಗೆಟ್ಟಿದ್ದಳು. ಅವನು ಮಾವನಮನೆಗೆ ಬರುತ್ತಿದ್ದಿದ್ದೇ ಕಮ್ಮಿ. ಬಂದರೂ ಒಂದೆರಡು ದಿನ ಉಸಿರು ಕಟ್ಟಿದವನ ಹಾಗೆ ತಾನಾಯ್ತು, ತನ್ನ ಕೋಣೆಯಾಯ್ತು ಎನ್ನುವ ಹಾಗೆ ಮುಗುಮ್ಮಾಗಿ ಕಾಲ ಕಳೆದು ಜಾಗ ಖಾಲಿ ಮಾಡುತ್ತಿದ್ದ.

'ಏನೇ, ಚೆನ್ನಾಗಿ ನೋಡ್ಕೋತಾನನೇ?' ಮದುವೆಯಾದ ಹೊಸದರಲ್ಲಿ ಅಪ್ಪ ವಿಚಾರಿಸಿಕೊಳ್ಳುತ್ತಿದ್ದುದಿತ್ತು, ಪತ್ನಿಯನ್ನೂ ಮಧ್ಯವರ್ತಿಯನ್ನಾಗಿಸಿಕೊಂಡು.

'ಒಂಥರಾ. ತಲೆಪ್ರತಿಷ್ಠೆ ಜಾಸ್ತಿ...' ಸತ್ಯ ಹೇಳಿದ್ದಳು ದೀಪಾ.

ಅಪ್ಪ, ಅಮ್ಮನೊಂದಿಗೆ ಮುಚ್ಚುಮರೆ ಮಾಡಿದ ದೀಪಾ ತಂಗಿಯೊಂದಿಗೆ ತನ್ನ ಅಂತರಂಗ ಬಿಚ್ಚಿಟ್ಟಿದ್ದಳು,

'ಕಾಲೇಜಿನಲ್ಲಿ ನಮನಮೂನಿ ಹುಡುಗೀರನ್ನ ನೋಡ್ತಾರಲ್ಲ, ಅವರ ಜೊತೆ ನನ್ನ ಹೋಲಿಕೆ ಮಾಡ್ತಾರೇನೋ. ಅವರ ಯೋಗ್ತಿಗೆ ನಾನು ಸಾಲದು ಅನ್ನಿಸ್ತಿರ್ಬೇಕು.'

'ಅದೆಲ್ಲಾ ಮದುವೆಗೆ ಮುಂಚೆ ಯೋಚ್ನೆ ಮಾಡ್ಬೇಕಾ, ಆಮೇಲಾ?'

'ಹೋಗ್ಲಿ ಬಿಡು, ನನ್ನ ಹಣೇಬರ...'

ಕಳಚಿಕೊಂಡು ಬರುವಷ್ಟು ಕೆಟ್ಟದ್ದೇನಾಗಿರಲಿಲ್ಲವಾಗಿ ದೀಪಾ ಗಂಡನಿಗೆ ಹೊಂದಿಕೊಂಡು, ಈಗ ಅವಳು ಎರಡು ಮಕ್ಕಳ ತಾಯಿ.

★★★

'ಕಂಡು ಕೇಳದ ಕಡೆ ಹೆಣ್ಣು ಕೊಡಬಾರ್ದು' ಎಂದು ಯಶೋದಮ್ಮನ ಅಣ್ಣ ನಿಶ್ಚಯಿಸಿಕೊಂಡಿದ್ದು ಈ ಕಾರಣಕ್ಕೆ. ಸಣ್ಣವಳಿಗೆ ಸಿಗುವ ಗಂಡ ತಮ್ಮ ಮೇಲೆ ವಿಶ್ವಾಸ, ಅಭಿಮಾನ ಇಟ್ಟುಕೊಳ್ಳುವಂತವನಾಗಿರಬೇಕು, ಕಡೆಗಾಲದಲ್ಲಿ ತಮ್ಮನ್ನು ನೋಡಿಕೊಳ್ಳಬೇಕು ಎಂದು ಸಹಜವಾಗಿ ಅವರು ಯೋಚಿಸಿದ್ದರ ಪ್ರತಿಫಲ ಯಶೋದಮ್ಮನ ರೊಟ್ಟಿ ಜಾರಿ ತುಪ್ಪಕ್ಕೆ ಬಿತ್ತು. ರಕ್ತಸಂಬಂಧಕ್ಕೆ ಹುಡುಗಿ ಕೊಡಲು ಹಿಂದೆಮುಂದೆ ಯೋಚಿಸುತ್ತಿದ್ದ ಗಿರಾಕಿ ತಾವಾಗಿ ತಂಗಿಯ ಬಳಿ ಕೇಳಿದರು, 'ಏನೇ, ವಾಲಗ ಊದಿಸಿಬಿಡೋಣ್ವಾ? ಏನಂತಿ? ಮನೇಲಿ ಬೆಣ್ಣೆ ಇಟ್ಗಂಡು ತುಪ್ಪಕ್ಕೆ ಯಾಕೆ ಅಳಬೇಕು?'

'ನಂಗೇನು ಅಡ್ಡಿಲ್ಲ' ಎಂದರು ಯಶೋದಮ್ಮ, ತಮಗಾದ ಹಿಗ್ಗು ಬೈತಿಟ್ಟುಕೊಂಡು.

'ಎಲ್ಲಾ ಅವರವರ ನಸೀಬು ಮಾರಾಯ್ತೀ. ಬ್ಯಾಡ ಅಂದ್ರೆ ಬಿಡಲ್ಲ, ಬೇಕು ಅಂದ್ರೆ ಸಿಗಲ್ಲ. ಎಲ್ಲಾ ಮೊದಲೇ ಬರೆದು ಕಳಿಸಿರ್ತಾನೆ ಬ್ರಹ್ಮ...'

ಮುದಿವಯಸ್ಸಿನಲ್ಲಿ ಯಾರು ತಮ್ಮನ್ನು ಜೋಪಾನ ಮಾಡುತ್ತಾರೆ ಎನ್ನುವ ಪ್ರಶ್ನೆಯೇ ಮೇಲುಗೈಯಾಗಿ ಪಾರಿಜಾತನ ಹೆತ್ತವರು ಅವಳನ್ನು ಈ ಮನೆಯ ಗಂಡಿಗೆ ಮದುವೆ ಮಾಡಿಕೊಟ್ಟು ಕೃತಾರ್ಥರಾಗಿದ್ದರು.

★★★

ಮದುವೆಯಾಗಿ ಐದು ವರ್ಷ. ಗಂಡ ಹೆಂಡತಿ ಒಪ್ಪವಾಗಿ ಸಂಸಾರ ಮಾಡಿಕೊಂಡಿದ್ದಾರೆ. ಸ್ವಂತ ಅಣ್ಣನ ಮಗಳನ್ನು ಅಂಗೈಮಲ್ಲಿಗೆಯಂತೆ ನೋಡಿಕೊಳ್ಳುತ್ತಾರೆ ಯಶೋದಮ್ಮ. ಎಲ್ಲಾ ಸರಿ, ಆದರೆ ಪಾರಿಜಾತನಿಗೆ ತಾಯ್ತನದ ಭಾಗ್ಯ ಇನ್ನೂ ಒದಗಿ ಬಂದಿಲ್ಲ. 'ಆಗುತ್ತೆ ಇವತ್ತಲ್ಲಾ ನಾಳೆ. ನೀನೇನು ಮುದುಕಿಯಾಗ್ಬಿಟ್ಯಾ?' ಯಶೋದಮ್ಮ ಸೊಸೆಗೆ ಸಮಾಧಾನ ಹೇಳುತ್ತಾರೆ, ತಿಂಗಳು ತಿಂಗಳೂ ಅವಳು ತಪ್ಪದೆ ಹೊರಗಾದಾಗ. ಹೀಗೆ ಹೇಳುತ್ತಾ ಆ ಮಾತಿನಲ್ಲಿ ತಾವೇ ಸಾಂತ್ವನ ಅರಸುತ್ತಾರೆ. ಪಾರಿಜಾತ ಹೊರಗಾಗುವುದು ನಾಲ್ಕು ದಿನ ಮುಂದೆ ಹೋದರೆ ಅವರ ಎದೆಬಡಿತ ತಾಳ ತಪ್ಪುತ್ತದೆ.